3.	ಶ್ರೀ ಮಾರಮ್ಮ ದೇವಸ್ಥಾನ	ಚಿಕ್ಕಬೀಚನಹಳ್ಳಿ	0.25
4.	ಶ್ರೀ ಬೀರೇಶ್ವರ ದೇವಸ್ಥಾನ	ಚಿಕ್ಕಬೀಚನಹಳ್ಳಿ	0.25
5.	ಶ್ರೀ ಸಿದ್ದರಾಮೇಶ್ವರ ದೇವಸ್ಥಾನ	ಚಿಕ್ಕಬೀಚನಹಳ್ಳಿ	0.25
6.	ಶ್ರೀ ವಿಘ್ನೇಶ್ವರ ದೇವಸ್ಥಾನ	ಹುಣಸೂರು	0.25
ಕೆ.ಆರ್. ನಗರ ಕ್ಷೇತ್ರ :			
1.	ಶ್ರೀ ಲಕ್ಷ್ಮೀದೇವಿ ದೇವಸ್ಥನ	ಕೆ.ಆರ್. ನಗರ	0.50
2.	ಶ್ರೀ ಕರುಮಾರಿಯಮ್ಮ ದೇವಸ್ಥಾನ	ಚಿಕ್ಕಬೈರ	0.25
3.	ಶ್ರೀ ಚಿಕ್ಕಯ್ಯ ದೊಡ್ಡಯ್ಯ ದೇವಸ್ಥಾನ	ಅಡಗೂರು	0.25
ಪಿರಿಯಾ ಪಟ್ಟಣ ಕ್ಷೇತ್ರ :			
1.	ಶ್ರೀ ಚನ್ನಕೇಶವ ದೇವಸ್ಥಾನ	ಹರದೂರು	0.25
2.	ಶ್ರೀ ಚನ್ನಕೇಶವ ದೇವಸ್ಥಾನ	ಮಕೋಡು	0.25
3.	ಶ್ರೀ ಈಶ್ವರ ದೇವಸ್ಥಾನ	ಬಾರ್ಯ	0.25
4.	ಶ್ರೀ ಚನ್ನಕೇಶವ ದೇವಸ್ಥಾನ	ಕಿರನಹಳ್ಳಿ	0.25
5.	ಶ್ರೀ ಬಸವೇಶ್ವರ ದೇವಸ್ಥಾನ	ಬಂಡೇಹಳ್ಳಿ	0.25

ಸುಳ್ಯ ತಾಲ್ಲೂಕಿಗೆ ಬಿಡುಗಡೆಯಾದ ಹಣ

423 (3824) : ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬರಪರಿಹಾರ ಕಾರ್ಯಕ್ರಮದಲ್ಲಿ ಕಳೆದ ಎರಡು ವರ್ಷಗಳಲ್ಲಿ ಸುಳ್ಯ ತಾಲ್ಲೂಕಿನಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ;

ಆ) ಇದರ ಅಂದಾಜು ವೆಚ್ಚವೆಷ್ಟು; ಕಾಮಗಾರಿವಾರು ವಿವರ ನೀಡುವುದು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) 2001–02 ಮತ್ತು 2002–03ನೇ ಸಾಲಿನಲ್ಲಿ ಸುಳ್ಯ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿರುವುದಿಲ್ಲ. ಆದ್ದರಿಂದ ಬರಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಧಾರವಾಡ ನಗರದಲ್ಲಿರುವ ಕೆರೆಗಳನ್ನು ಅಭಿವೃದ್ಧಿ ಪಡಿಸಿ ಪ್ರವಾಸಿ ಸ್ಥಳಗಳನ್ನಾಗಿ ಮಾಡುವುದು

424 (3968) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡದಲ್ಲಿ ಇರುವ ಕೆರೆಗಳನ್ನು ಅಭಿವೃದ್ಧಿ ಮಾಡಿದರೆ ಲೇಕ್ ಆಗಿ ಪ್ರವಾಸಿ ತಾಣಗಳಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಧಾರವಾಡ ನಗರದ ಕೇಲಗೇರಿ ಗ್ರಾಮದ ಸಮೀಪ ಪ್ರಮುಖ ಲೇಕ್ (ಕೆರೆ) 1911 ರಲ್ಲಿ ಸರ್ ಎಂ.ವಿಶ್ವೇಶ್ವರಯ್ಯನವರು ಹಾಗೂ ಅಂದಿನ ಹಿರಿಯೂರು ಧಾರವಾಡ ನಗರದ ಕುಡಿಯುವ ನೀರಿನ ತಾಣವಾಗಿ ನಿರ್ಮಿಸಿರುವುದು ನಿಜವೇ?

ಇ) ಹಾಗಾದರೆ, ಈಗ ಸದರಿ ಕೆರೆಯು ಯಾವ ಸ್ಥಿತಿಯಲ್ಲಿ ಇರುವುದು ಹಾಗೂ ಅದರ ವಿಸ್ತಾರವೆಷ್ಟು?

ಈ) ಈ ಕೆರೆಯನ್ನು ಅಭಿವೃದ್ಧಿಪಡಿಸಿ ಪ್ರವಾಸಿ ತಾಣವನ್ನಾಗಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಡಿ.ಬಿ. ಇನಾಂದಾರ್, (ತಂತ್ರಜ್ಞಾನ ರಾಜ್ಯ ಸಚಿವರು)

ಅ) ಧಾರವಾಡದಲ್ಲಿ ಇರುವ ಕೆಲಗೇರಿ ಹಾಗೂ ಇತರ ಕೆರೆಗಳನ್ನು ಅಭಿವೃದ್ಧಿ ಪಡಿಸಿದರೆ ಪ್ರವಾಸಿ ತಾಣಗಳಾಗಬಹುದು.

ಆ) ಮೂಲತ: ಈ ಕೆರೆಯನ್ನು ನಿರ್ಮಿಸಿರುವುದು ಕುಡಿಯುವ ನೀರಿನ ಉದ್ದೇಶಕ್ಕಾಗಿ ಎಂದು ತೋರುತ್ತದೆ.

ಇ) ಸದರಿ ಕೆರೆಯ ವಿಸ್ತೀರ್ಣ 159ಎ – 21ಗು, ಸದರಿ ಕೆರೆಯ ಸದ್ಯಕ್ಕೆ ಕೃಷಿ ವಿಶ್ವವಿದ್ಯಾಲಯದ ಸುಪರ್ದಿನಲ್ಲಿದೆ.

ಈ) ಈ ಕೆರೆಯ ನೀರನ್ನು ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನೆ ವಿಷಯ ವಸ್ತವನ್ನಾಗಿ ಬಳಸಲಾಗುತ್ತಿದೆ.

ಕೊಡಗು ಜಿಲ್ಲೆಯ ಸಿ.ಆರ್. ಎಫ್. ನಿಂದ ಬಂದಿರುವ ಹಣದ ವಿವರ

426 (3070) : ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರ ಪೇಟೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಸಾಲಿನಲ್ಲಿ ಸರ್ಕಾರದಿಂದ ಕೊಡಗು ಜಿಲ್ಲೆಗೆ ಸಿ.ಆರ್.ಎಫ್. ನಿಧಿಯಿಂದ ಬಿಡುಗಡೆ ಮಾಡಿದ ಹಣ ಎಷ್ಟು (ವಿವರ ನೀಡುವುದು) ;

ಆ) ಕಡಿಮೆ ಮೊತ್ತವನ್ನು ಸರಿಪಡಿಸಲು ಈ ಸಾಲಿನಲ್ಲಿ ಹೆಚ್ಚಿಗೆ ಮೊತ್ತವನ್ನು ಬಿಡುಗಡೆ ಮಾಡಿರುವುದು ನಿಜವೇ;

ಇ) ಎಷ್ಟು ಹಣವನ್ನು ಈ ನಿಧಿಯಲ್ಲಿ ಬಿಡುಗಡೆಗೊಳಿಸಲಾಗಿದೆ; ಬಿಡುಗಡೆ ಮಾಡದಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗ ಇಲಾಖೆ)

ಅ) ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ ಜಿಲ್ಲಾವಾರು ಹಣ ಬಿಡುಗಡೆ ಮಾಡುತ್ತಿರುವುದಿಲ್ಲ. ಆದರೆ 2001–02 ಹಾಗೂ 2002–03 ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ರೂ. 115.00 ಲಕ್ಷಗಳ ಅಂದಾಜು ಮೊತ್ತದ 2 ಕಾಮಗಾರಿಗಳು ಮಂಜೂರಿಗಿರುತ್ತವೆ, ಇದರಲ್ಲಿ ಒಂದು ಕಾಮಗಾರಿಯು ಪರ್ಣಗೊಂಡಿದ್ದು, ಇನ್ನೊಂದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಆ) 2003–04 ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ಈವರೆಗೂ ಕೇಂದರ ರಸ್ತೆ ನಿಧಿಯಡಿ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವುದು

427 (3807) : ಶ್ರೀ ಎಸ್. ಶಿವಣ್ಣ (ತುಮಕೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?